**<u>ದಿ:27.09.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>**

**<u>ಪಾಟೀ ಸವಾಲು:-</u>**ವಾದಿ ಪರ ಶ್ರೀ.**D.P.,** ವಕೀಲರಿಂದ:-

ನಾನು ಪಿಡಬ್ಲೂಡಿ ಇಲಾಖೆಯಿಂದ ವರ್ಕ್ ಇನ್ಸಪೆಕ್ಟರ್ ಆಗಿ ಸನ್ 2003 ರಲ್ಲಿ ನಿವೃತ್ತರಾಗಿರುತ್ತನೆ . ನಾನು ದಾವಣಗೆರೆ ಮತ್ತು ಜಗಳೂರಿನಲ್ಲಿ ಕೆಲಸ ಮಾಡಿರುತತೇನೆ . ನಾನು ಪಿಡಬ್ಲೂಡಿ ಇಲಾಖೆಯಿಂದ ಜಿಲ್ಲಾ ಪಂಚಾಯತಿಗೆ ವರ್ಗಾವಣೆ ಆಗಿರುತ್ತನೆ . ನಾನು ಜಗಳೂರಿನ ಜಿಲ್ಲಾ ಪಂಚಾಯತಿಯಲ್ಲಿ ಆಕೃತಿ ರಚನಾಕಾರರಾಗಿ ಸನ್ 1997 ರಿಂದ ನಾನು ನಿವೃತಿವೊಂದುವರಗೊ ಕೆಲಸ ಮಾಡಿರುತ್ತೇನೆ . ಮೊದಲಿಗೆ ಕೇಸನಹಳ್ಳಿ ಗ್ರಾಮವು ಗ್ರಾಮ ಪಂಚಾಯತಿ ಆಗಿರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ . ಕೇಸೆನಹಳ್ಳಿ ಗ್ರಾಮ ಪಂಚಾಯತಿಗೆ ಎಷ್ಟು ಗ್ರಾಮಗಳು ಇರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ . ಕೇಸೆನಹಳ್ಳಿ ಗ್ರಾಮ ಪಂಚಾಯತಿ ದಾವಣೆಗೆರೆ ಜಿಲ್ಲಾ ಪಂಚಾಯತಿ ವ್ಯಾಪ್ತಿಗೆ ಸೇರುತ್ತದೆ . ಕೇಸೆನಹಳ್ಳಿ ಗ್ರಾಮವು ಹಿಂದಿನಿಂದಲೂ ಗ್ರಾಮ ಪಂಚಾಯತಿಯಾಗಿ ಇತ್ತು . ಜಗಳೂರು ತಾಲ್ಲೂಕಿನಲ್ಲಿ ಒಟ್ಟು ನಾಲ್ಕು ಜಿಲ್ಲಾ ಪಂಚಾಯತಿಯ ಕ್ಷೇತ್ರಗಳು ಇರುತ್ತವೆ . ಕೇಸೆನಹಳ್ಳಿ ಗ್ರಾಮವು ಸೊಕ್ಕೆ ಜಿಲ್ಲಾ ಪಂಚಾಯಿತಿಯ ಕ್ಷೇತ್ರಕ್ಕೆ ಸೇರುತ್ತದೆ . ಮೊದಲು ಕೇಸನಹಳ್ಳಿ ಗ್ರಾವವು ಅಣಬೂರು ಜಿಲ್ಲಾ ಪಂಚಾಯತಿಯ

ಕ್ಷೇತ್ರಕ್ಕೆ ಸೇರಿರುತ್ತದೆ ಎಂದರೆ ಸರಿಯಲ್ಲ. ನನಗೆ ಜಗಳೂರು ತಾಲ್ಲೂಕಿನ ನಾಲ್ಕು ಜಿಲ್ಲಾ ಪಂಚಾಯತಿಯ ಮಾಹಿತಿ ಇರುತ್ತದೆ ಎಂದರೆ ಸಾಕ್ಷಿ ನಾನು ಕೆಲಸ ಮಾಡಿದ ಇಲಾಖೆಯ ಬಗ್ಗೆ ಮಾಹಿತಿ ಇರುತ್ತದೆ ಎಂದು ಹೇಳುತ್ತಾರೆ . ಕೇಸನಹಳ್ಳಿ ಗ್ರಾಮವು ಮೊದಲಿಗೆ ಹೊಸಕೆರೆ ಗ್ರಾಮ ಪಂಚಾಯತಿಗೆ ಸೇರಿರುತ್ತದೆ ಎಂದರೆ ಸರಿಯಲ್ಲ. ನನಗೆ ಸುಳ್ಳು ಹೇಳುತ್ತಿದ್ದೇನೆ , ನನಗೆ ಎಲ್ಲಾ ವಿಚಾರ ತಿಳಿದಿರುತ್ತದೆ ಎಂದರೆ ಸರಿಯಲ್ಲ. ಕೇಸೆನಹಳ್ಳಿ ಗ್ರಾಮವು ಈಗಲೂ ಸಹ ಸೊಕ್ಕೆ ಕ್ಷೇತ್ರಕ್ಕೆ ಸೇರಿರುತ್ತದೆ . ಸೊಕ್ಕೆ ಕ್ಷೇತ್ರದ ಜಿಲ್ಲಾ ಪಂಚಾಯತಿಗೆ ಎಷ್ಟು ಗ್ರಾಮ ಪಂಚಾಯತಿಗಳು ಬರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ . ಸೊಕ್ಕೆ ಕ್ಷೇತ್ರದ ಜಿಲ್ಲಾ ಪಂಚಾಯತಿ ವ್ಯಾಪ್ತಿಗೆ 5 ಗ್ರಾಮ ಪಂಚಾಯತಿಗಳಾದ ಸೊಕ್ಕೆ ,ಗುರುಸಿದ್ದಾಪುರ , ಬಸವನಕೊಟೆ , ಕೇಸೇನಹಳ್ಳಿ ಮತ್ತು ಹೊಸಕೆರೆ ಗ್ರಾಮ ಪಂಚಾಯತಿ ಇರುತ್ತವೆ ಎಂದರೆ ನನಗೆ ಮಾಹಿತಿ ಇರುವುದಿಲ್ಲ . ನಾನು ಜಿಲ್ಲಾ ಪಂಚಾಯತಿಯಲ್ಲಿ ಕೆಲಸ ಮಾಡಿದ ಕಾರಣ ಗ್ರಾಮ ಪಂಚಾಯತಿಗಳಲ್ಲಿ ಕೆಲಸ ಮಾಡುವವರು ನನ್ನ ಸಹಪಾಠಿಗಳು ಇರುತ್ತಾರೆ ಎಂದರೆ ಸರಿಯಲ್ಲ. ಗ್ರಾಮ ಪಂಚಾಯತಿಯ ಎಲ್ಲಾ ಅಧಿಕಾರಿಗಳು ನಾನು ಕೆಲಸ ಮಾಡುತ್ತಿದ್ದ ಜಿಲ್ಲಾ ಪಂಚಾಯತಿಯ ಕಾರ್ಯ ವ್ಯಾಪ್ತಿಗೆ ಬರುತ್ತಾರೆ ಎಂದರೆ ಸರಿ. ಕೇಸೆನಹಳ್ಳಿ ಗ್ರಾಮದಲ್ಲಿ ಅಂದಾಜು 250 ಮನೆಗಳು ಇರಬಹುದು . ಕೇಸೆನಹಳ್ಳಿ ಗ್ರಾಮವು ಸಣ್ಣ ಗ್ರಾಮ ಇರುತ್ತದೆ ಎಂದರೆ ಸರಿ. ನಾನು ಕೇಸೇನಹಳ್ಳಿ ಗ್ರಾಮಕ್ಕೆ ಮುಂಚೇನಿಂದಲೂ ಬಂದು ಹೋಗಿ ಮಾಡುತ್ತಿದ್ದೆ ಎಂದರೆ ಸರಿ. ಈ ಹಿಂದೆ ನ್ಯಾಯಾಲಯದಲ್ಲಿ PW-2 ಸಾಕ್ಷಿ ನೀಡಿದ ಚೌಡಪ್ಪ ರವರು ಹೊಸಕೆರೆ ಮಂಡಲ ಪಂಚಾಯತಿಯ ಅಧ್ಯಕ್ಷರು ಇದ್ದರು ಎಂದರೆ ಸರಿ.

( ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು , ಆಲಿಸಿ ಸಮಯ ನೀಡಲಾಯಿತು )

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು**.)**

ಓ ಹೇ ಕೇ ಸರಿ ಇದೆ

Sd/-

ಸಿವಿಲ್ ನ್ಯಾಯಾಧೀಶರು**,** ಜಗಳೂರು